ಸಾಕ್ಷಿಯನ್ನು ದಿಃ **21.01.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ವಿ.ಜಿ.ಎಂ. ವಕೀಲ**ರಿಂದ**

ನಾನು ವಕೀಲನಾಗಿ 12 ವರ್ಷ ಪೂರ್ಣಗೊಂಡಿದೆ, 13 ವರ್ಷ ನಡೆಯುತ್ತಿದೆ. ನಾನು ವಕೀಲ ವೃತ್ತಿಯೊಂದಿಗೆ ಪತ್ರ ಬಹರಗಾರನಾಗಿ ಕೂಡ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಒಂದು ಮರಣ ಶಾಸನ ಪತ್ರಕ್ಕೆ ಸಾಕ್ಷಿದಾರನಾಗಿದ್ದು, ಆ ಬಗ್ಗೆ ಸಾಕ್ಷಿ ನುಡಿಯಲು ಬಂದಿದ್ದೇನೆ. ಸದರಿ ವಿಲ್ ದಿಃ 09.03.2015 ರಂದು ತಯಾರಿಸಲಾಗಿದೆ. ಈ ವಿಲ್ ಅನ್ನು ತಯಾರು ಮಾಡಿದ್ದವರು ಸಿ. ದಿನೇಶ್ ರವರು. ಸಿ ದಿನೇಶ್ ಕೂಡ ವಕೀಲರು ಎಂದರೆ ಸರಿ. ಹಾಲಿ ಸಿ. ದಿನೇಶ್ ವಕೀಲರು ತೀರಿ ಹೋಗಿದ್ದಾರೆ ಎಂದರೆ ಸರಿ. ಈ ವಿಲ್ ಅನ್ನು ಪುಟ್ಟಮ್ಮ ಮತ್ತು ಪರಮೇಶ್ ಗೌಡ ರವರು ಜಯಮ್ಮ ರವರ ಮಗ ಹರಿಕೃಷ್ಣ ರವರಿಗೆ ಬರೆದುಕೊಟ್ಟಿದ್ದಾರೆ. ವಿಲ್ ಬರೆಯುವರಿಗೆ ವಿಲ್ ಗೆ ಒಳಪಟ್ಟ ಆಸ್ತಿ ಮೇಲೆ ಸಂಪೂರ್ಣ ಹಕ್ಕು ಇರಬೇಕು ಎಂದರೆ ಸರಿ. ಸದರಿ ವಿಲ್ ಪತ್ರಕ್ಕೆ ಪುಟ್ಟಮ್ಮ ಮತ್ತು ಪರಮೇಶ್ ಗೌಡ ರವರು ಹೆಬ್ಬಟ್ಟಿನ ಸಹಿ ಹಾಕಿದ್ದು, ಇದಕ್ಕೆ ಸಾಕ್ಷಿದಾರರಾಗಿ ಚಲುವಯ್ಯ ಬಿನ್ ಲೇಟ್ ಬುಂಡಯ್ಯ ರವರು ಸಹಿ ಮಾಡಿದ್ದಾರೆ. ಈ ವಿಲ್ ಬರೆಯುವ ಸಮಯದಲ್ಲಿ ಪುಟ್ಟಮ್ಮ ಮತ್ತು ಪರಮೇಶ್ ಗೌಡ ರವರ ದೈಹಿಕ ಸ್ಥಿತಿ ಮತ್ತು ಮಾನಸೀಕ ಆರೋಗ್ಯ ಯಾವ ಮಟ್ಟದಲ್ಲಿ ಇತ್ತು ಎಂದು ನನಗೆ ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ವಿಲ್ ಬರೆದಿದ್ದಾರೆ ಎನ್ನಲಾದ ದಿನಾಂಕದ ಸಮಯಕ್ಕೆ ಪುಟ್ಟಮ್ಮ ರವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳುತ್ತಿರಲಿಲ್ಲ ಎಂದರೆ ಆ ಮಟ್ಟದಲ್ಲಿ ಏನು ಅವರು ಅಸ್ವಸ್ಥರಾಗಿರಲಿಲ್ಲ. ಅದೇ ರೀತಿ ಅವರಿಗೆ ಪ್ರಾಪಂಚಿಕ ಜ್ಞಾನ ಅಂದರೆ ತಾವು ಏನು ಮಾಡುತ್ತಿದ್ದೇವೆ ಎಂಬ ಅರಿವು ಕೂಡ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ಅದೆ ರೀತಿ ಪರಮೇಶ್ ಗೌಡರವರು ಜನ್ಮತಃ ಅಂಕವಿಕಲರಾಗಿದ್ದರು ಎಂದರೆ ಆ ಬಗ್ಗೆ ಟ್ರಾನ್ಸ್ ಲೇಟರ್ ರವರನ್ನು ಕರೆಸಿದ್ದು, ಅವರ ಮುಖಾಂತರ ಹೇಳಿದ್ದರ ಪ್ರಕಾರ ವಿಲ್ ಬರೆಯಲಾಯಿತು

ಎನ್ನುತ್ತಾರೆ. ಪರಮೇಶ್ ಗೌಡರಿಗೆ ಯಾವ ರೀತಿಯ ಅಂಗವಿಕಲತೆ ಇತ್ತು ಎಂದು ಕೇಳದೆಯೆ ನೀವೆ ಹೇಳುತ್ತಿದ್ದಿರಲ್ಲಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲೆ ಅವರ ದೈಹಿಕ ಸ್ಥಿತಿಯ ಬಗ್ಗೆ ಪ್ರಶ್ನೆ ಕೇಳಿದ್ದರಿಂದ ಈ ಉತ್ತರ ನೀಡುತ್ತಿದ್ದೇನೆ ಎನ್ನುತ್ತಾರೆ. ಪರಮೇಶ್ ಗೌಡರವರು ಯಾವ ರೀತಿಯ ಅಂಗವೈಕಲ್ಯದಿಂದ ಬಳುತ್ತಿದ್ದಾರೆ ಎಂದು ನನಗೆ ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ಪರಮೇಶ್ ಗೌಡ ರವರಿಗೆ ಜನ್ಮತಃ ಕೈ-ಕಾಲು ಸ್ವಾಧೀನದಲ್ಲಿ ಇರಲಿಲ್ಲ ಅವರು ಬುದ್ಧಿಮಾಂಧ್ಯರು ಕೂಡ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪರಮೇಶ್ ಗೌಡ ರವರ ತಮ್ಮ ದೈನಂದಿನ ಕಾರ್ಯಗಳನ್ನು ಕೂಡ ಮಾಡಿಕೊಳ್ಳದಷ್ಟು ಅಸ್ವಸ್ಥರಾಗಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ, ಇರಬಹುದು ಎನ್ನುತ್ತಾರೆ. ಸದರಿ ವಿಲ್ ಅನ್ನು ನಾನು ಓದಿದ್ದೆ. ವಿಲ್ ಪತ್ರದಲ್ಲಿ ಪುಟ್ಟಮ್ಮನವರಿಗೆ 72 ಅಥವಾ 73 ವರ್ಷ ವಯಸ್ಸಾಗಿತ್ತು ಎಂದು ಬರೆಸಲಾಗಿತ್ತು. ಪರಮೇಶ್ ಗೌಡರಿಗೆ 57 ವರ್ಷ ವಯಸ್ಸಾಗಿತ್ತು. ಪುಟ್ಟಮ್ಮನವರಿಗೆ ಎಷ್ಟು ಜನ ಮಕ್ಕಳಿದ್ದರು ಎಂದು ವಿಲ್ ಬರೆಸಿದ್ದಾರೆ, ಆದರೆ ಈಗ ಆ ವಿಚಾರವನ್ನು ಹೇಳಲು ನನಗೆ ನೆನಪಿಲ್ಲ. ಈಗ ನಾನು ಹೇಳಿದ ಹೇಳಿಕೆ ಪ್ರಕಾರ ಪುಟ್ಟಮ್ಮ ನವರಿಗೆ 13 ವರ್ಷ ವಯಸ್ಸಾಗಿದ್ದಾಗ ಪರಮೇಶ್ ಗೌಡ ಹುಟ್ಟಿದ್ದಾರಾ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಿಲ್ ಬರೆಯುವ ಕಾಲಕ್ಕೆ ಪುಟ್ಟಮ್ಮ ನವರಿಗೆ 90 ವರ್ಷಕ್ಕೂ ಮೀರಿ ವವಯಸ್ಸಾಗಿತ್ತು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಲ್ ನಲ್ಲಿ ಏ.ಎಸ್ 9/2008 ಪುಟ್ಟಮ್ಮ ಮತ್ತು ಪರಮೇಶ್ ಗೌಡರ ಭಾಗಕ್ಕೆ ಏನು ಆಸ್ತಿ ಬರುತ್ತದೊ ಆ ಆಸ್ತಿಗಳ ಬಗ್ಗೆ ವಿಲ್ ಬರೆಯಲಾಗುತ್ತದೆ ಎಂದು ನಮೂದಿಸಿದ್ದರು. ವಿಲ್ ಬರೆಯುವಾಗ ವಿಲ್ ಬರೆಯುವವರಿಗೆ ಸದರಿ ಆಸ್ತಿ ಮೇಲೆ ಸಾರ್ವಭೌಮವಾದ ಹಕ್ಕಿರಬೇಕು, ವಿಲ್ ಗೆ ಒಳಪಟ್ಟ ಆಸ್ತಿಯ ಸ್ಪಷ್ಟವಾದ ಚಕ್ಕುಬಂದಿ, ಸರ್ವೆ ನಂ. ಮತ್ತು ವಿಸ್ತೀರ್ಣದ ವಿವರಗಳಿರಬೇಕು ಎಂದರೆ ಸರಿ. ವಿಲ್ ನಲ್ಲಿ ಅವರು ಬರೆಯುತ್ತಿರುವ ಆಸ್ತಿಯ ಸರ್ವೆ ನಂ. ವಿಸ್ತೀರ್ಣ , ಚಕ್ಕುಬಂದಿಯ ವಿವರಗಳು ಇರುವುದಿಲ್ಲ ಎಂದರೆ ಸಾಕ್ಷಿ ವಿಲ್ ಬರೆಯುವಾಗ ಅಂತಹ ಯಾವುದೆ ವಿವರಗಳ ಅವಶ್ಯಕತೆ ಇರುವುದಿಲ್ಲ. ವಿಲ್ ಬಗ್ಗೆ ಯಾವುದಾದರೂ ವಿವಾದ ಹುಟ್ಟಿಕೊಂಡಲ್ಲಿ ಮಾತ್ರ ಅದನ್ನು ನಿರ್ಧರಿಸುವ ಅಧಿಕಾರಿ ನ್ಯಾಯಾಲಯದ ವಿವೇಚನೆಗೆ ಬಿಟ್ಟಿರುತ್ತದೆ ಎನ್ನುತ್ತಾರೆ. ವಿಲ್ ಬರೆಯುವ ಕಾಲಕ್ಕೆ ನಾನು ಈ ಮೇಲೆ ಹೇಳಿದಂತೆ ಓ.ಎಸ್ ನಂ. 9/2008 ರ ತೀರ್ಮಾಣ ಎಫ್.ಡಿ.ಪಿ ಯಲ್ಲಿ ಇನ್ನು ಪ್ರಾಥಮಿಕ ಹಂತದಲ್ಲಿಯೆ ಇದ್ದು, ವಿಲ್ ಬರೆಯುವವರಿಗೆ ಇದೆ ಆಸ್ತಿ ಬಂದಿದೆ ಎಂಬ

ಅಂತಿಮ ತೀರ್ಮಾಣ ಇನ್ನೂ ಕೂಡ ಆಗಿಲ್ಲ ಎಂದರೆ ನಿಜ. ಈ ರೀತಿ ಯಾವ ಸ್ವತ್ತು ವಿಲ್ ಗೆ ಒಳಪಟ್ಟಿದೆ ಎಂಬ ಯಾವುದೆ ವಿವರಗಳು ಇಲ್ಲದೆ ಇರುವಾಗ ಅಂತಹ ವಿಲ್ ಬರೆಯುವವರಿಗೆ ಯಾವುದೆ ಸಂಪೂರ್ಣ ಹಕ್ಕು ಇರುವುದಿಲ್ಲ, ಅದೆ ರೀತಿ ಅದರ ಫಲಾನುಭವಿಗೆ ವಿಲ್ ನ ಸ್ವತ್ತಿನ ಮೇಲೆ ಯಾವುದೆ ಹಕ್ಕು ಕೂಡ ಹುಟ್ಟಿಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಇರುವ ವಿಲ್ ಪ್ರಿವಿಲೈಜ್ಡ್ ಆಗಿರುವುದಿಲ್ಲ ಎಂದರೆ ವಿಲ್ ನಲ್ಲಿ ಅಂತಹ ಯಾವುದೆ ವಿಧ ಇರುವುದಿಲ್ಲ ಎನ್ನುತ್ತಾರೆ.

ಒಬ್ಬ ವ್ಯಕ್ತಿಯು ಯುದ್ಧ ಭೂಮಿಯಲ್ಲಿ ಸಾಯುವ ಸ್ಥಿತಿಯಲ್ಲಿ ಇರುವಾಗ ಅಥವಾ ಮರಣ ಶೈಯ್ಯೆ ಬರೆಯುವ ವಿಲ್ ಗೆ ಪ್ರಿವಿಲೈಜ್ಡ್ ವಿಲ್ ಎನ್ನುತ್ತಾರೆ ಎಂದರೆ ಸಾಮಾನ್ಯ ವಿಲ್ ನೋಂದಣಿ ಆಗಬೇಕು ಎಂಬ ಷರತ್ತು ಇಲ್ಲ ಎನ್ನುತ್ತಾರೆ. ಪುಟ್ಟಮ್ಮ ಹಾಗೂ ಪರಮೇಶ್ ಗೌಡರಿಗೆ ತಾವು ಏನು ಮಾಡುತ್ತಿದ್ದೇವೆ ಎಂಬ ಪರಿಜ್ಞಾನ ಇಲ್ಲದಂತಹ ಸ್ಥಿತಿಯಲ್ಲಿ ಅವರುಗಳನ್ನು ಕರೆದುಕೊಂಡು ಬಂದು ಮೋಸದಿಂದ ಹಾಗೂ ಆಸ್ತಿ ಲಪಟಾಯಿಸಿಕೊಳ್ಳಬೇಕು ಎಂಬ ದುರುದ್ದೇಶದಿಂದ ನನ್ನನ್ನು ಮತ್ತು ವಿಲ್ ನ ಬಿಕಲಂದಾರರನ್ನು ಷರಿಕ್ ಮಾಡಿಕೊಂಡು ಸುಳ್ಳು ವಿಲ್ ಅನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ವಿಲ್ ನ ಕೊನೆಯ 7 ನೇ ಪುಟದಲ್ಲಿ ಸಾಕ್ಷಿಯಾಗಿ ಚಲುವಯ್ಯನವರ ಸಹಿ ಇದೆ ಹೊರತು ನನ್ನ ಸಹಿ ಇಲ್ಲ ಎಂದರೆ, ಬಿಟ್ಟು ಹೋಗಿದೆ ಎನ್ನುತ್ತಾರೆ. ಇಷ್ಟನು ನೋಡಿದರೆ ಅಷ್ಟೆ ಸಾಕು ಇದು ಖೊಟ್ಟಿ / ಸೃಷ್ಟಿಸಿರುವ ದಾಖಲೆ ಎಂದು ಕಂಡು ಬರುತ್ತದೆ ಎಂದರೆ ಸರಿಯಲ್ಲ, ನೋಂದಣಿ ಆದ ನಂತರ ಸಹಿ ಮಾಡಿದ್ದೇನೆ ಎನ್ನುತ್ತಾರೆ.

ಸಾಕ್ಷಿದಾರರಾದ ಚಲುವಯ್ಯ ರವರು ಕೂಡ ನಮ್ಮ ಕಛೇರೀಯಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೂ ಕೂಡ ಈ ವಿಲ್ ವಿಚಾರ ಗೊತ್ತಿಲ್ಲ ಎಂದರೆ ಸಾಕ್ಷಿ ಅವರು ಬಿಕಲಂದಾರರಾದ ಸಿ. ದಿನೇಶ್ ರವರ ಕಛೇರಿಯ ಸಹಾಯಕರು ಎನ್ನುತ್ತಾರೆ. ಎಲ್ಲರೂ ಷರಿಕ್ ಆಗಿ ಆಸ್ತಿಯನ್ನು ಲಪಟಾಯಿಸಿಕೊಳ್ಳುವ ಉದ್ದೇಶದಿಂದ ವಿಲ್ ಅನು ಸೃಷ್ಟಿಪಡಿಸಲಾಗಿದೆ ಎಂದರೆ ಸರಿಯಲ್ಲ. ವಿಲ್ ಗೆ ಸಂಬಂಧಪಟ್ಟಂತಹ ಪುಟ್ಟಮ್ಮ ನವರು ಮರಣ ಹೊಂದಿದ್ದಾರೆ, ಆದರೆ ಪರವೇಶ್ ಗೌಡ ರವರು ಈಗಲೂ ಜೀವಂತ ಇದ್ದಾರೆ ಆದ್ದರಿಂದ

ಈ ವಿಲ್ ಜಾರಿಗೊಳತಕ್ಕದಂತಹ ದಾಖಲೆ ಅಲ್ಲ, ಈ ವಿಲ್ ಗೆ ಇನ್ನೂ ಮಾನ್ಯತೆ ಬಂದಿಲ್ಲ ಎಂದರೆ ಅದನ್ನು ನಾನು ಹೇಳಲಾರೆ ನ್ಯಾಯಾಲಯ ನಿರ್ಧರಿಸಬೇಕು ಎನ್ನುತ್ತಾರೆ.

<u>ಪಾಟೀ ಸವಾಲುಃ **4** ನೇ ಎದುರುದಾರರ ವಾರಸುದಾರರ ಪರ ಶ್ರೀ ಎಂ.ಆರ್.ಎಲ್. ವಕೀಲ**ರಿಂದ**</u>

ನನಗೆ 6 ನೇ ಎದುರುದಾರರಾದ ಹರಿಕೃಷ್ಣ ರವರು ಸಂಬಂಧಿಕರಲ್ಲ, ಅದೇ ರೀತಿ ಪುಟ್ಟಮ್ಮ ರವರು ಕೂಡ ಸಂಬಂಧಿಕರಲ್ಲ. ಇವರುಗಳು ನನಗೆ ಪರಿಚಯಸ್ಥರಲ್ಲ. ಪುಟ್ಟಮ್ಮ ನವರಿಗೆ ಎಷ್ಟು ಮಕ್ಕಳು ಅವರುಗಳು ಯಾರ್ಯಾರು ಎಂಬ ವಿವರಗಳ ಸಂಪೂರ್ಣ ಮಾಹಿತಿ ಇರುವುದಿಲ್ಲ. ಪುಟ್ಟಮ್ಮ ರವರು ಮತ್ತು ಅವರ ಮಕ್ಕಳು ಎಲ್ಲೆಲ್ಲಿ, ಯಾವ ಯಾವ ರೀತಿ ಯಾರ ಯಾರ ಬಳಿ ಬದುಕುತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪುಟ್ಟಮ್ಮನವರು ಯಾವ ದಿನಾಂಕದಂದು ನನ್ನನ್ನು ಭೇಟಿಯಾಗಿದ್ದರು ಎಂದರೆ ನನಗೆ ವಿಲ್ ಬರೆಯುವ 4-5 ದಿನಗಳ ಹಿಂದೆ ಪತ್ರ ಬರೆದಿರುವ ದಿನೇಶ್ ರವರ ಕಛೇರಿಯಲ್ಲಿ ನನಗೆ ಭೇಟಿಯಾಗಿದ್ದರು. ದಿನೇಶ್ ರವರ ಕಛೇರಿಗೆ ಬರಲು ನನಗೆ ಯಾರು ಹೇಳಿದ್ದರು ಎಂದರೆ ನಾನು ದಿನೇಶ್ ರವರ ಕಛೇರಿಯಲ್ಲಿ ಅವರ ಜ್ಯೂನಿಯರ್ ಆಗಿ ಕೆಲಸ ಮಾಡುತ್ತಿದ್ದಾಗ ಪುಟ್ಟಮ್ಮರವರು ಬಂದಿದ್ದರು ಎನ್ನುತ್ತಾರೆ . ನಾನು ದಿನೇಶ್ ರವರು ಒಂದೂವರೆ ವರ್ಷ ಕೆಲಸ ಮಾಡಿದ್ದೆ. ನಾನು ದಿನೇಶ್ ರವರಲ್ಲಿ 2014-15 ನೇ ಸಾಲಿನಲ್ಲಿ ಕೆಲಸ ಮಾಡಿದ್ದೆ, ಆದರೆ ಯಾವ ದಿನ,ಯಾವ ತಿಂಗಳಿನಿಂದ ಎಂದು ನನಗೆ ನಿಖರವಾಗಿ ನೆನಪಿಲ್ಲ. ಪುಟ್ಟಮ್ಮ ಅವರು ದಿಃ 05.03.2015 ರಂದು ಬಂದಿದ್ದಿರಬೇಕು. ಅವರು ಕಛೇರಿಗೆ ಆ ದಿನ ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಬಂದಿದ್ದರು. ಅವರ ಜೊತೆಯಲ್ಲಿ ಯಾರ್ಯಾರು ಬಂದಿದ್ದರು ಎಂದು ನನಗೆ ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ಅವರು ಮೊದಲು ನಮ್ಮ ಕಛೇರಿಯ ಹಿರಿಯರಾದಂತಹ ದಿನೇಶ್ ರವರು ಭೇಟಿಯಾದರು. ಆ ದಿನ ಅವರುಗಳು ನನ್ನೊಂದಿಗೆ ನೇರವಾಗಿ ಮಾತುಕತೆ ಆಡಿರಲಿಲ್ಲ. ಈ ರೀತಿ ವಿಲ್ ನ ದಾಖಲೆ ಮಾಡಬೇಕು ಎಂದು ನಮ್ಮ ಸಿನಿಯರ್ ನಮಗೆ ತಿಳಿಸಿದ್ದರು. ವಿಲ್ ಅನ್ನು ನಮ್ಮ ಸಿನಿಯರ್ ನ ಟೈಪಿಸ್ಟ್ ತಯಾರು ಮಾಡಿದ್ದರು. ಅವರ ಹೆಸರು ನನಗೆ ಹೇಳಲಾಗುವುದಿಲ್ಲ. ವಿಲ್ ನ ಒಕ್ಕಣೆಯನ್ನು ಬರಹಗಾರರಾದ ದಿನೇಶ್ ರವರು ಪಕ್ಷಗಾರರಿಂದ ತಿಳಿದುಕೊಂಡು ಟೈಪಿಸ್ಟ್ ಗೆ ಹೇಳಿದರು. ಎಲ್ಲಾ ದಾಖಲೆಗಳನ್ನು ಈ ರೀತಿ ವಿಲ್ ಆಗುವ

4-5 ದಿನ ಮೊದಲು ಬಂದಿದ್ದ ದಿನದಂದೆ ತಯಾರು ಮಾಡಿಟ್ಟುಕೊಂಡಿದ್ದರು. ಆ ದಿನ ಸುಮಾರು ಜನರು ಇದ್ದರು ಯಾರ್ಯಾರು ಎಂದು ಹೇಳಲು ಆಗುವುದಿಲ್ಲ. ಆ ದಿನ ಕಛೇರಿಯಲ್ಲಿ ಬೇರೆಯವರೂ ಸೇರಿ 10 ರಿಂದ 15 ಜನ ಇದ್ದರು.

ದಿನೇಶ್ ರವರ ಕಛೇರಿ ಸುಮಾರು 12/15 ಅಡಿ ಅಗಲ ಇರಬಹುದು. ಅವರ ಕಛೇರಿಯಲ್ಲಿ ಎಷ್ಟು ಟೇಬಲ್, ಚೇರುಗಳನ್ನು ಹಾಕಿದ್ದರು ಎಂದರೆ 10 ಜನ ಕುಳಿತುಕೊಳ್ಳುವಷ್ಟು ಸೌಲಭ್ಯ ಇತ್ತು ಎನ್ನುತ್ತಾರೆ. ಈ ರೀತಿ 10-15 ಜನ ಇದ್ದರೆ ಯರು ಕಛೇರಿಯ ಒಳಗಡೆ ಕುಳಿತುಕೊಂಡಿದ್ದರು, ಯಾರು ಕಛೇರಿಯ ಹೊರಗಡೆ ಕುಳಿತುಕೊಂಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ದಿನೇಶ್ ರವರು ಕಛೇರಿಯಲ್ಲಿ ಅವರು ಕುಳಿತುಕೊಳ್ಳಲು ಒಂದು ಟೇಬಲ್, ಮತ್ತು ಅವರ ಜ್ಯೂನಿಯರ್ಸ್ ಕುಳಿತುಕೊಳ್ಳಲು ಒಂದು ಟೇಬಲ್ ಮತ್ತು ಟೈಪಿಸ್ಟ್ ಗೆ ಒಂದು ಟೇಬಲ್ ಇದೆ ಎಂದರೆ ಸರಿ. ಈ ರೀತಿ ಇದ್ದರೆ ಅವರ ಕಛೇರಿಯಲ್ಲಿ 4 ರಿಂದ 5 ಚೇರುಗಳನ್ನು ಮಾತ್ರ ಅವರ ಪಕ್ಷಗಾರರು ಕುಳಿತುಕೊಳ್ಳಲು ಅವಕಾಶ ಇರುತ್ತದೆ ಎಂದರೆ ಸರಿಯಲ್ಲ. ಆ ದಿನ ವಿಲ್ ಬರೆಯಲು ಎಷ್ಟು ಗಂಟೆಯಿಂದ ಎಷ್ಟು ಗಂಟೆ ವರೆಗೂ ಮಾಹಿತಿ ಪಡೆದುಕೊಂಡರು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಮಾಹಿತಿ ಪಡೆದಾದ ನಂತರ ಟೈಪ್ ಮಾಡಿಸಿದರು. ಆ ದಿನ ವಿಲ್ ಬರೆಯಲು ಏನೇನು ಮಾಹಿತಿಗಳನ್ನು ಪಡೆದಕೊಂಡರು ಎಂಬ ಬಗ್ಗೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ವಿಲ್ ಬರೆಯಲು ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದರು ಎಂದು ನಾನು ನೋಡಿಲ್ಲ. ವಿಲ್ ಬರೆಸಲು ಪುಟ್ಟಮ್ಮ ಮತ್ತು ಪರಮೇಶ್ ಗೌಡ ಇಬ್ಬರೂ ಬಂದಿದ್ದರು. ಅವರ ಜೊತೆಯಲ್ಲಿ ಸುಮಾರು 3-4 ಜನ ಬಂದಿದ್ದರು ಅವರ ಹೆಸರುಗಳು ನನಗೆ ಗೊತ್ತಿಲ್ಲ. ಅವರೆಲ್ಲಾ ಒಡೆಯರಹೊಸಹಳ್ಳಿ ಗ್ರಾಮದವರಾಗಿದ್ದರು. ಪರಮೇಶ್ ಗೌಡ ರವರಿಗೆ ಮಾತನಾಡುವಷ್ಟು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಮಾತನಾಡುತ್ತಿದ್ದರಾ ಎಂದರೆ ಸ್ಪಷ್ಟವಾಗಿ ಇಲ್ಲದೆ ಇದ್ದರೂ ಅವರ ಟ್ರಾನ್ಸ್ ಲೇಟರ್ ಮೂಲಕ ಮಾತನಾಡಿಸುತಿದ್ದರು. ಟ್ರಾನ್ಸ್ ಲೇಟರ್ ರವರನ್ನು ಆ ದಿನ ಅವರು ಬರುವಾಗಲೆ ಕರೆ ತಂದಿದ್ದರು. ಟ್ರಾನ್ಸ್ ಲೇಟ್ ಮಾಡಿದವರ ಹೆಸರು, ವಿವರಗಳು ನನಗೆ ಗೊತ್ತಿಲ್ಲ. ಟ್ರಾನ್ಸ್ ಲೇಟ್ ಮಾಡಲು ಬಂದವರು ಪರಿಣಿತರಾ ಅಥವಾ ಸಾಮನ್ಯ

ವ್ಯಕ್ತಿಯಾ ಎಂಬ ನನಗೆ ಅರಿವು ಇರುವುದಿಲ್ಲ. ದಾಖಲೆ ಅರ್ಧ ತಯಾರಾಗಿದ್ದಾಗ ನನ್ನನ್ನು ನ್ಯಾಯಾಲಯದ ಕೆಲಸಗಳಿಗೆ ಹಾಜರಾಗಲು ದಿನೇಶ್ ರವರು ಕಳುಹಿಸಿಕೊಟ್ಟರು. ಆ ದಿನ ದಿನೇಶ್ ರವರು ಕೂಡ ನ್ಯಾಯಾಲಯಕ್ಕೆ ಬಂದಿದ್ದರು. ಅವರು ಆ ದಿನ ನ್ಯಾಯಾಲಯಕ್ಕೆ ಎಷ್ಟು ಸಮಯಕ್ಕೆ ಬಂದರು ಎಂದು ನಿರ್ಧಿಷ್ಟವಾಗಿ ನನಗೆ ಗೊತ್ತಿಲ್ಲ. ಅಂದು ಯಾವ ವಾರವಾಗಿತ್ತು ಎಂದು ನನಗೆ ನೆನಪಿಲ್ಲ. ಆ ದಿನ ದಾಖಲೆ ಅರ್ಧ ಆದಾಗ ನಾನು ನ್ಯಾಯಾಲಯಕ್ಕೆ ಬಂದೆ ಎಂದು ಹೇಳಿದ್ದು, ಆನಂತರ ನನಗೆ ವಿಚಾರದ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ಪತ್ರ ಬರೆದ ದಿನೇಶ್ ರವರಿಗೆ ಸಂಪೂರ್ಣ ವಾಹಿತಿಯನ್ನು ಪುಟ್ಟಮ್ಮರವರು ಕೊಟ್ಟರಾ ಅಥವಾ ಪರಮೇಶ್ ರವರು ಕೊಟ್ಟರಾ ಅಥವಾ ಇಬ್ಬರೂ ಕೊಟ್ಟರಾ ಎಂದು ನನಗೆ ನೆನಪಿಲ್ಲ. ಪುಟ್ಟಮ್ಮನವರು ನಾನು ಇರುವವರೆಗೂ ಎಲ್ಲಿಯವರೆಗೂ ಮಾಹಿತಿಕೊಟ್ಟಿದ್ದರು ಎಂದು ಈಗ ನನಗೆ ನೆನಪಿಲ್ಲ. ಹಾಗೆಯೆ ಪರಮೇಶ್ ಗೌಡ ರವರು ನಾನು ಇರುವವರೆಗೂ ಎಲ್ಲಿಯವರೆಗೂ ಮಾಹಿತಿ ಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ.

ಆ ದಿನ ಅವರೆಲ್ಲಾ ವಿಲ್ ಬರೆಸಲು ಬಂದವರು ಮತ್ತು ಅವರ ಜೊತೆಗೆ ಬಂದಿದ್ದ 2-3 ಜನರು ಸಂಜೆಯವರೆಗೂ ಇದ್ದರು. ಆ ದಿನವೆ ನಾನು ಕಛೇರಿಗೆ ಬರುವಷ್ಟರಲ್ಲಿ ದಾಖಲೆಯನ್ನು ಪೂರ್ಣವಾಗಿ ಬರೆಯಲಾಗಿತ್ತು. ಪೂರ್ಣವಾದ ದಾಖಲೆಯನ್ನು ನಾನು ನೋಡಿದ್ದೆ, ಅದನ್ನು ನನಗೆ ಓದಲೆಂದು ದಿನೇಶ್ ರವರು ಕೊಟ್ಟಿದ್ದರು. ನಾನು ದಾಖಲೆಯನ್ನು ಓದಿ ಆದ ನಂತರ ವಿಲ್ ನ ಪಕ್ಷಗಾರರು ಹೋದರು. ದಿನೇಶ್ ರವರು ಹೇಳಿದ ಮೇರೆಗೆ ಅವರೆಲ್ಲಾ ಹೋದರು. ಆ ದಿನ ಏಕೆ ಅಷ್ಟು ಸಮಯದ ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಮೊದಲಿಗೆ ಅರ್ಧ ದಾಖಲೆ ಆಗಿತ್ತು ನಾನು ಮತ್ತು ದಿನೇಶ್ ರವರು ಪುನಃ ಕಛೇರಿಗೆ ಹೋದ ಮೇಲೆ ದಾಖಲೆ ಸಂಪೂರ್ಣವಾಯಿತು ಆದ್ದರಿಂದ ಅವರು ಅಲ್ಲಿಯವರೆಗೂ ಇದ್ದರು ಎನ್ನುತ್ತಾರೆ. ನಾನು ಆ ದಿನ ಸಂಜೆ 4 ಗಂಟೆಗೆ ಕಛೇರಿಗೆ ಹೋಗಿದ್ದು, ಮಧ್ಯಾಹ್ನದ ವಿರಾಮದ ಸಮಯದಲ್ಲಿ ಹೋಗಿರಲಿಲ್ಲ. ದಿನೇಶ್ ರವರು ಮಧ್ಯಾಹ್ನದ ಸಮಯದಲ್ಲಿ ಕಛೇರಿಗೆ ಹೋಗಿದ್ದರೊ ಇಲ್ಲವೊ ಎಂಬುದವರ ಮಾಹಿತಿ ನನಗೆ ಇರುವುದಿಲ್ಲ. ನಾನು ಮಧ್ಯಾಹ್ನದ ಮೇಲೆ ಹೋದ ನಂತರ ಉಳಿದ ಕಾಲು ಭಾಗದ ದಾಖಲೆ ಬರೆದು ಪೂರ್ಣಗೊಳಿಸಿದರು. ಪತ್ರ ಪೂರ್ಣಗೊಳ್ಳುವಾಗ ವಿಲ್ ಬರೆಸಿದವರು ಮತ್ತು ಅವರೊಂದಿಗೆ ಬಂದಿದ್ದ 3-4 ಜನ ಮಾತ್ರ ಇದ್ದರು. ಈ 3-4 ಜನ ಅವರ

ಊರಿನವರೊ ಅಥವಾ ಬೇರೆಯವರೊ ಎಂದು ನನಗೆ ಗೊತ್ತಿಲ್ಲ. ಅವರ ಜೊತೆಯಲ್ಲಿ ಇದ್ದವರ ಪೈಕಿ ಇಬ್ಬರು ಮಾತ್ರ ಒಡೆಯರಹೊಸಹಳ್ಳಿ ಗ್ರಾಮದವರು, ಬೇರೆಯವರು ಎಲ್ಲಿಯವರು ಎಂದು ನನಗೆ ಗೊತ್ತಿಲ್ಲ, ಅವರುಗಳು ಆ ದಿನ ದಾಖಲೆ ಪೂರ್ಣಗೂಳ್ಳುವವರೆಗೂ ಇದ್ದರು. ಆ ರೀತಿ ಬಂದಿದ್ದರು ವಿಲ್ ಬರೆಯುವವರ ಸಂಬಂಧಿಕರಾ ಅಲ್ಲವಾ ಎಂದು ನನಗೆ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳಲು ನನಗೇನಾದರೂ ತೊಂದರೆ ಇತ್ತಾ ಎಂದರೆ ನನಗೆ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಆ 4 ಜನರು ಇವರುಗಳ ಸಹಾಯಕ್ಕೆ ಬಂದಿದ್ದರು. ಯಾವ ರೀತಿಯ ಸಹಾಯ ಎಂದು ನನಗೆ ಹೇಳಲು ಆಗುವುದಿಲ್ಲ. ದಾಖಲೆ ಪೂರ್ಣಗೊಂಡ ನಂತರ ಅದಕ್ಕೆ ಸಾಕ್ಷಿಯಾಗಿ ಇದ್ದವರೆಂದರೆ ಚಲುವಯ್ಯ ಮತ್ತು ನಾನು ಎನ್ನುತ್ತಾರೆ. ನಾವಲ್ಲದೆ ಸದರಿ ದಾಖಲೆಗೆ ಬೇರೆಯಾರೂ ಆ ದಿನ ಸಾಕ್ಷಿಯಾಗಿ ಸಹಿ ಮಾಡಲಿಲ್ಲ. ದಾಖಲೆ ನೋಂದಣಿ ಆಗುವ ಸಮಯದಲ್ಲಿ ಇನ್ಯಾರ್ಯಾರು ಸಾಕ್ಷಿಯಾಗಿ ಬರುತ್ತಾರೆ ಎಂದು ಗೊತ್ತಿರಲಿಲ್ಲ ಆದ್ದರಿಂದ ದಾಖಲೆಗೆ ತಯಾರಾದ ದಿನ ಸಾಕ್ಷಿಯಾಗಿ ಸಹಿ ಮಾಡಿರಲಿಲ್ಲ. ಸಾಕ್ಷಿದಾರರಾದ ಚಲುವಯ್ಯ ನವರು ಆ ದಿನ ಎಷ್ಟು ಸಮಯಕ್ಕೆ ಬಂದರು ಎಂದು ನನಗೆ ನೆನಪಿಲ್ಲ. ಅವರು ಆ ದಿನ ನಾನು ಬರುವ ಮೊದಲೆ ಬಂದಿದ್ದರು. ಅವರು ಅಲ್ಲಿಯೆ ಕಟ್ಟಡ ನೋಡಿಕೊಂಡು ಇರುವವರಾಗಿದ್ದರು ಎನ್ನುತ್ತಾರೆ. ಈ ರೀತಿ ಕಟ್ಟಡ ನೋಡಿಕೊಂಡು ಇರುವವರಿಗೆ ಕಛೇರೀಯ ಒಳಗೆ ಬನ್ನಿ ಎಂದು ಕರೆದವರು ಯಾರು ಎಂದು ನನಗೆ ಗೊತ್ತಿಲ್ಲ. ಚಲುವಯ್ಯ ಈಗಲೂ ಬದುಕಿದ್ದಾರೆ ಎಂದರೆ ಸರಿ. ಈಗಲೂ ಕೂಡ ಅವರು ಸದರಿ ಕಟ್ಟಡಕ್ಕೆ ಬರುತ್ತಾರೆ, ನೋಡಿಕೊಂಡು ಹೋಗುತ್ತಾರೆ, ಓಡಾಡಿಕೊಂಡು ಇದ್ದಾರೆ ಎಂದರೆ ಸರಿ, ಆದರೆ ಒಮ್ಮೊಮ್ಮೆ ನಡಗುತ್ತಾರೆ ಎನ್ನುತ್ತಾರೆ.

ಸದರಿ ಚಲುವಯ್ಯ ನವರು ಪುಟ್ಟಮ್ಮ ನವರಿಗೆ ಎಲ್ಲಿ ಹೇಗೆ ಪರಿಯವಾಗಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆ ದಿನ ಸಾಕ್ಷಿಯಾಗಿ ಸಹಿ ಮಾಡಲು ಬರಬೇಕು ಎಂದು ಹೇಳಿರಲಿಲ್ಲ ಆದರೆ ದಿನೇಶ್ ರವರು ನನಗೆ 9 ನೇ ತಾರೀಖು ಇರಬೇಕು ಎಂದು ಹೇಳಿದ್ದರು. ಆ 9 ನೇ ತಾರೀಖಿನಂದು ಪುಟ್ಟಮ್ಮ ಮತ್ತು ಪರಮೇಶ್ ಗೌಡರವರು ಎಷ್ಟು ಸಮಯಕ್ಕೆ ಬಂದರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಅವರು ಕಛೇರಿಗೆ ಬಂದ ನಂತರ ಸಬ್ ರಿಜಿಸ್ಟ್ರಾರ್ ಕಛೇಗೆ ಬಂದರು.ಅವರು ಬಂದಾಗ

ನಾನು ಕಛೇರಿಯಲ್ಲಿ ಇದ್ದೆ. ಆ ದಿನ ನಮ್ಮ ಕಛೇರಿಗೆ ಪುಟ್ಟಮ್ಮ ಮತ್ತು ಪರ ಮೇಶ್ ಮಾತ್ರ ಬಂದಿದ್ದರಾ ಅಥವಾ ಅವರ ಜೊತೆ ಬೇರೆಯಾದರೂ ಬಂದಿದ್ದರಾ ಎಂದು ನನಗೆ ನೆನಪಿಲ್ಲ. ಆ ದಿನ ಯಾವುದೆ ಮಾತುಕತೆ ಆಗಲಿಲ್ಲ. ಸಬ್ ರಿಜಿಸ್ಟ್ರಾರ್ ಕಛೇರಿಗೆ ಅವರು ಹೋದ ನಂತರ ನಾನು ಹೋದೆ. ನಾನು ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋದಾಗ ನೋಂದಣಿ ಕಾರ್ಯನಡೆಯುತ್ತಿತ್ತು. ನಾನು ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೇಗುವಷ್ಟರಲ್ಲಿ ನೋಂದಣಿ ಫೋಟೋ ತೆಗೆಯುವ ಹಂತಕ್ಕೆ ಬಂದಿತ್ತು. ಆ ದಿನ ಪುಟ್ಟಮ್ಮ ಮತ್ತು ಪರಮೇಶ್ ಗೌಡರವರ ಜೊತೆಯಲ್ಲಿ ಯಾರು ಬಂದಿದ್ದರು ಎಂದು ನನಗೆ ನೆನಪಿಲ್ಲ. ಸಬ್ ರಿಜಿಸ್ಟ್ರಾರ್ ಕಛೇರಿಯ ಒಳಗೆ ಒಂದ ಪ್ರತ್ಯೇಕ ಗ್ಲಾಸ್ ಜೆಂಬರ್ ನಲ್ಲಿ ಸಬ್ ರಿಜಿಸ್ಟ್ರಾರ್ ರವರು ಇರುತ್ತಾರೆ ಎಂದರೆ ಆಗ ಆ ರೀತಿ ಇರಲಿಲ್ಲ ಎನ್ನುತ್ತಾರೆ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಪುಟ್ಟಮ್ಮ ಮತ್ತು ಪುರಮೇಶ್ ಗೌಡರವರನ್ನು ಸಬ್ ರಿಜಿಸ್ಟ್ರಾರ್ ಕರೆಸಿ ಮಾತನಾಡಿದರೊ ಇಲ್ಲವೊ ಎಂದು ನಾನು ನೋಡಿದೆನಾ ಎಂದರೆ ನಾನು ಹೋಗುಷ್ಟರಲ್ಲಿ ಅದೆಲ್ಲಾ ಮುಗಿದು ಹೋಗಿತ್ತು. ಟ್ರಾನ್ಸ್ ಲೇಟರ್ ಆ ದಿನ ಕೂಡ ಬಂದಿದ್ದರು. ಆಗಲೂ ಕೂಡ ಅವರು ಯಾವ ಊರಿನವರು ಇತ್ಯಾದಿ ವಿವರಗಳನ್ನು ನಾನು ಕೇಳಿ ತಿಳಿದುಕೊಂಡಿರಲಿಲ್ಲ. ಆ ದಿನ ಕೂಡ ಅವರು ಪರಿಣಿತರಾ ಅಥವಾ ಸಾಮಾನ್ಯ ವ್ಯಕ್ತಿಯಾ ಎಂದು ನಾನು ಕೇಳಿ ತಿಳಿದುಕೊಳ್ಳಲಿಲ್ಲ. ಸದರಿ ಪರಿಣಿತರನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಿಂದ ಕರೆಸಿರಲಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯವಾದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.